# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (872) 812 |
| ಸದಸ್ಯರ ಹೆಸರು | : | ಶ್ರೀ ಎನ್ . ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 24.08.2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುವ ಶಾಲೆಗಳು ಯಾವುವು; ಅದರಲ್ಲಿ ಕಲಿಯುತ್ತಿರುವ ಮಕ್ಕಳ ಸಂಖ್ಯೆ ಎಷ್ಟು; ಶಾಲಾ ಮಕ್ಕಳಿಗೆ ಯಾವ ಯಾವ ಉಚಿತ ಸೌಲಭ್ಯಗಳನ್ನು ನೀಡಲಾಗುತ್ತದೆ; (ವಿವರ ಒದಗಿಸುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಪ್ರಸ್ತುತ 540 ಪರಿಶಿಷ್ಟ ಜಾತಿ, 155 ಪರಿಶಿಷ್ಟ ವರ್ಗ, 179 ಹಿಂದುಳಿದ ವರ್ಗಗಳ ವಸತಿ ಶಾಲೆ/ಪದವಿ ಪೂರ್ವ ಕಾಲೇಜುಗಳನ್ನೊಳಗೊಂಡಂತೆ ಒಟ್ಟು 874 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. 2026-27ನೇ ಶೈಕ್ಷಣಿಕ ಸಾಲಿನಲ್ಲಿ 6 ರಿಂದ 12ನೇ ತರಗತಿಯವರೆಗೆ ಒಟ್ಟು 2,07,650 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.<br><br>ವಿವಿಧ ಸಂಖ್ಯಾಬಲವುಳ್ಳ ವಸತಿ ಶಾಲೆಗಳ ವಿವರ ಈ ಕೆಳಕಂಡಂತಿದೆ.<br><br>➢ 6 ರಿಂದ 10ನೇ ತರಗತಿಯವರೆಗೆ ಪ್ರತಿ ತರಗತಿಗೆ ತಲಾ 50 ರಂತೆ 250 ಮಂಜೂರಾತಿ ಸಂಖ್ಯೆಯ ಪರಿಶಿಷ್ಟ ಜಾತಿಯ- 473, ಪರಿಶಿಷ್ಟ ವರ್ಗ – 144 ಹಿಂದುಳಿದ ವರ್ಗಗಳ –152 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.<br>➢ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳಲ್ಲಿ 6 ರಿಂದ 12ನೇ ತರಗತಿ ತಲಾ 40 ರಂತೆ 2 ವಿಭಾಗಗಳಿದ್ದು, ಒಟ್ಟು 560 ಮಂಜೂರಾತಿ ಸಂಖ್ಯೆಯ ಪರಿಶಿಷ್ಟ ಜಾತಿಯ- 09, ಪರಿಶಿಷ್ಟ ವರ್ಗ –01, ಹಿಂದುಳಿದ ವರ್ಗಗಳ –05 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ.<br>➢ 250 ಸಂಖ್ಯಾಬಲವುಳ್ಳ 6 ರಿಂದ 10ನೇ ತರಗತಿಯವರೆಗೆ ಕಾರ್ಯನಿರ್ವಹಿಸುತ್ತಿದ್ದ ವಸತಿ ಶಾಲೆಗಳನ್ನು ಉನ್ನತೀಕರಿಸಿ 11 ಮತ್ತು 12 ನೇ ತರಗತಿಗೆ 160 ಸಂಖ್ಯಾಬಲ ಹೆಚ್ಚಿಸಿ ಮೇಲ್ದರ್ಜೆಗೇರಿಸಿದ ಪರಿಶಿಷ್ಟ ಜಾತಿಯ- 46, ಪರಿಶಿಷ್ಟ ವರ್ಗ –08, ಹಿಂದುಳಿದ ವರ್ಗಗಳ – 09 ವಸತಿ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.<br>➢ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಿಜ್ಞಾನ ವಸತಿ ಕಾಲೇಜುಗಳು (MDRPU) 11 ಮತ್ತು 12ನೇ ತರಗತಿ ವಿಜ್ಞಾನ ವಿಭಾಗದಲ್ಲಿ, ಪ್ರತಿ ತರಗತಿಗೆ 80 ವಿದ್ಯಾರ್ಥಿಗಳಂತೆ ಒಟ್ಟು 160 ಮಂಜೂರಾತಿ ಸಂಖ್ಯೆಯು ಪರಿಶಿಷ್ಟ ಜಾತಿಯ- 12, ಪರಿಶಿಷ್ಟ ವರ್ಗ –02, ಹಿಂದುಳಿದ ವರ್ಗಗಳ – 13 ವಸತಿ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.<br>ಸಂಘದ ವಸತಿ ಶಾಲೆ ಕಾಲೇಜುಗಳಿಗೆ ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ/ಡಾ. ಬಿ. ಆರ್. ಅಂಬೇಡ್ಕರ್ / ಶ್ರೀಮತಿ ಇಂದಿರಾಗಾಂಧಿ/ ಅಟಲ್ ಬಿಹಾರಿ ವಾಜಪೇಯಿ ಹಾಗೂ ಇನ್ನಿತರ ಮಹನೀಯರ ಗೌರವ ಪೂರ್ವಕ ಸೂಚಕವಾಗಿ ಹೆಸರಿಸಿದೆ. |

| | | |
|---|---|---|
| | | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನಡೆಯುತ್ತಿರುವ ರಾಜ್ಯದ ಎಲ್ಲಾ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಉಚಿತ ವಸತಿ ಸಹಿತ ಆಂಗ್ಲ ಮಾಧ್ಯಮ ಶಿಕ್ಷಣವನ್ನು ನೀಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಅವಶ್ಯವಿರುವ ಸಿದ್ಧಪಡಿಸಿದ ಸಮವಸ್ತ್ರ, ಶೂ, ಸಾಕ್ಸ್, ಟೈ, ಬೆಲ್ಟ್, ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿ ಹಾಗೂ ಶುಚಿ ಸಂಭ್ರಮ ಕಿಟ್‌ಗಳನ್ನು ಹಾಗೂ ಅವಶ್ಯವಿರುವ ಮೂಲಭೂತ ಸೌಕರ್ಯಗಳಾದ ಟು ಟುಯರ್ ಕಾಟ್, ಡೆಸ್ಕ್ ಕಮ್ ಬೆಂಚ್, ಹಾಸಿಗೆ ಮತ್ತು ದಿಂಬು, ಬೆಡ್‌ಶೀಟ್ ಮತ್ತು ಬೆಡ್‌ಸ್ಪ್ರೆಡ್, ಪ್ರಯೋಗಾಲಯ ಸಾಮಗ್ರಿಗಳು, ನರ್ಸಿಂಗ್ ಕಿಟ್, ಪಾತ್ರೆ-ಪರಿಕರಗಳು, ತಟ್ಟೆ-ಲೋಟ್, ಗ್ರೈಂಡರ್, ಪೀಠೋಪಕರಣಗಳು, ಪ್ರೊಜೆಕ್ಟರ್ ಮತ್ತು ಸ್ಕ್ರೀನ್ ಹಾಗೂ ವಾಟರ್ ಪ್ಯೂರಿಫೈಯರ್‌ಗಳನ್ನು ಸೋಲಾರ್ ವಾಟರ್ ಹೀಟರ್ ಟ್ರ್ಯಾಕ್ ಸೂಟ್ ಮತ್ತು ನೈಟ್ ಡ್ರೆಸ್, ಸೊಳ್ಳೆ ಪರದೆ, ಸ್ವೆಟರ್, ಟವಲ್, ಟ್ರಂಕ್ ಹಾಗೂ ವಸತಿ ಕಾಲೇಜುಗಳಲ್ಲಿ KCET/JEE/NEET ಕೋರ್ಸ್‌ಗಳ ಪ್ರವೇಶ ಪರೀಕ್ಷೆಗೆ ವಿಶೇಷ ತರಬೇತಿಯೊಂದಿಗೆ ಬೇಡಿಕೆ ಅನುಸಾರ ವಸತಿ ಶಾಲೆ/ಕಾಲೇಜುಗಳಿಗೆ ಉಚಿತವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಿ, ನಿರ್ದಿಷ್ಟ ಮಾನದಂಡಗಳನ್ನು ಪೂರೈಸಿದ ಅರ್ಹ ಎಲ್ -1 ಬಿಡ್‌ದಾರರಿಂದ ಒದಗಿಸಲಾಗುತ್ತಿದೆ.<br>ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 67 ಸರ್ಕಾರಿ ಡಾ:ಬಿ.ಆರ್ ಅಂಬೇಡ್ಕರ್ ವಸತಿ ಶಾಲೆ (1 ರಿಂದ 5 ತರಗತಿ) ಗಳನ್ನು ನಿರ್ವಹಿಸಲಾಗುತ್ತಿದ್ದು, ಸದರಿ ವಸತಿ ಶಾಲೆಗಳಲ್ಲಿ 2923 ಮಕ್ಕಳಿಗೆ ಪ್ರವೇಶವಕಾಶ ನೀಡಲಾಗಿರುತ್ತದೆ. ವಿವರವನ್ನು ಅನುಬಂಧ-1 ಮತ್ತು 2ರಲ್ಲಿ ನೀಡಲಾಗಿದೆ. |
| ಆ) | ಶಾಲಾ ಮಕ್ಕಳಿಗೆ ಶೂ. ಪುಸ್ತಕ, ಸಮವಸ್ತ್ರ ಸರಬರಾಜು ಮಾಡಲು ಟೆಂಡರ್ ಕರೆಯಲಾಗಿದೆಯೇ: (ಟೆಂಡರ್ ಪ್ರಕ್ರಿಯೆಯ ವಿವರಗಳೊಂದಿಗೆ ಮಾಹಿತಿ ನೀಡುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 2026-27ನೇ ಶೈಕ್ಷಣಿಕ ಸಾಲಿನಲ್ಲಿ ಸಿದ್ಧಪಡಿಸಿದ ಸಮವಸ್ತ್ರಗಳು ಹಾಗೂ ಶೂ, ಸಾಕ್ಸ್, ಟೈ ಮತ್ತು ಬೆಲ್ಟ್ ಗಳನ್ನು ಪೂರೈಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ<br>ಸಿದ್ಧಪಡಿಸಿದ ಸಮವಸ್ತ್ರಗಳು:<br>2026-27ನೇ ಸಾಲಿಗೆ ಆದೇಶ ಸಂಖ್ಯೆ. ಸಕಇ 17 ಎಂಡಿಎಸ್ 2026, ಬೆಂಗಳೂರು, ದಿನಾಂಕ: 15.02.2026 ರನ್ವಯ ದಿನಾಂಕ:17.04.2026 ರಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ M/s Sree ShreeShaila Mallikarjuna Enterprises, Mathapitru Krupa "Vasu Nivas", 6th cross, P No.20, Asst No.634/33, Vasu Nivas, Near Huda Park, M J Nagar, BDCC Bank Colony, Hospet,Ballari, Karnataka-583201 ರವರು ಯಶಸ್ವಿ L1 ಬಿಡ್‌ದಾರರಾಗಿ ಆಯ್ಕೆಯಾಗಿದ್ದು, ಸದರಿಯವರಿಗೆ ದಿನಾಂಕ:29.05.2026 ರಂದು ರೂ.46,38,53,237/-ಗಳ ಮೊತ್ತಕ್ಕೆ ಕಾರ್ಯಾದೇಶ ನೀಡಿದ್ದು, ಸರಬರಾಜು ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |

<table>
<tr>
<td></td>
<td></td>
<td>
ಶೂ, ಸಾಕ್ಸ್, ಟೈ ಮತ್ತು ಬೆಲ್ಟ್:-<br><br>
2026-27ನೇ ಸಾಲಿಗೆ ಆದೇಶ ಸಂಖ್ಯೆ: ಸಕಇ 18 ಎಂಡಿಎಸ್ 2026, ದಿನಾಂಕ:23.04.2026 ರನ್ವಯ ದಿನಾಂಕ: 03.07.2026 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ.<br>
ಪುಸ್ತಕಗಳು:-<br>
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ರಾಜ್ಯದ ಎಲ್ಲಾ ವಸತಿ ಶಾಲೆಗಳಿಗೆ ಪಠ್ಯಪುಸ್ತಕಗಳನ್ನು ಸರಬರಾಜು ಮಾಡಲು ಕರ್ನಾಟಕ ಪಠ್ಯಪುಸ್ತಕಗಳ ಸಂಘ(ರಿ), ಬೆಂಗಳೂರು ಇವರಿಗೆ ಬೇಡಿಕೆ ಪತ್ರ (Indent) ಸಲ್ಲಿಸಿದ್ದು, ಸದರಿಯವರು ಈಗಾಗಲೇ ಪಠ್ಯಪುಸ್ತಕಗಳನ್ನು ಸರಬರಾಜು ಮಾಡಿದ್ದಾರೆ.<br><br>
ಆದೇಶ ಸಂಖ್ಯೆ: ಸಕಇ 19 ಎಂಡಿಎಸ್ 2026, ಬೆಂಗಳೂರು ದಿನಾಂಕ: 27.04.2026 ರ ಆದೇಶದನ್ವಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲೇಖಕ್ ಬ್ರ್ಯಾಂಡ್ ನ ನೋಟ್ ಬುಕ್ ಮತ್ತು ಲೇಖನಾ ಸಾಮಗ್ರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ನಿಯಮಾನುಸಾರ 4(ಜಿ) ವಿನಾಯಿತಿ ಹೊಂದಿರುವ ಮೆ||ಎಂ.ಎಸ್.ಐ.ಎಲ್. ಸಂಸ್ಥೆಯಿಂದ ಖರೀದಿಸಿ ಸರಬರಾಜು ಮಾಡಲಾಗುತ್ತಿದೆ.
</td>
</tr>
<tr>
<td>ಇ)</td>
<td>ಶೂ, ಪುಸ್ತಕ, ಸಮವಸ್ತ್ರ ಹಾಗೂ ಬ್ಯಾಗುಗಳನ್ನು ಯಾವ ಮೊತ್ತಕ್ಕೆ ಖರೀದಿಸಲಾಗುತ್ತಿದೆ:<br>(ಪ್ರತಿಯೊಂದು ವಸ್ತುವಿನ ಹೆಸರು ಕಂಪನಿಯ ಬ್ರಾಂಡ್‌ನೊಂದಿಗೆ ವಿವರ ನೀಡುವುದು)</td>
<td>
ಸಿದ್ಧಪಡಿಸಿದ ಸಮವಸ್ತ್ರಗಳು:-<br><br>
2026-27ನೇ ಸಾಲಿಗೆ ಆದೇಶ ಸಂಖ್ಯೆ: ಸಕಇ 17 ಎಂಡಿಎಸ್ 2026, ಬೆಂಗಳೂರು, ದಿನಾಂಕ: 15.02.2026 ರನ್ವಯ ದಿನಾಂಕ:17.04.2026 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ M/s Sree ShreeShaila Mallikarjuna Enterprises, Mathapitru Krupa "Vasu Nivas", 6th cross, P No.20, Asst No.634/33, Vasu Nivas, Near Huda Park, MJ Nagar, BDCC Bank Colony, Hospet,Ballari, Karnataka-583201 ರವರು ಯಶಸ್ವಿ L1 ಬಿಡ್‌ದಾರರಾಗಿ ಆಯ್ಕೆಯಾಗಿದ್ದು, ಸದರಿಯವರಿಗೆ ದಿನಾಂಕ:29.05.2026 ರಂದು ರೂ.46,38,53,237/-ಗಳ ಮೊತ್ತಕ್ಕೆ ಕಾರ್ಯಾದೇಶ ನೀಡಿದ್ದು, ಸರಬರಾಜು ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ (ಪ್ರತಿ ವಿದ್ಯಾರ್ಥಿಗೆ 3 ಜೊತೆ ರಂತೆ (ಪ್ರಮಾಣ 2 ಜೊತೆ ಕಲರ್+ಒಂದು ಜೊತೆ ಬಿಳಿ ಸಮವಸ್ತ್ರಗಳನ್ನು ವಿತರಿಸಲಾಗುತ್ತದೆ).
<table>
<tr><th>2026-27 ನೇ ಸಾಲಿನ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ</th><th>ವಿದ್ಯಾರ್ಥಿಗಳ ಸಂಖ್ಯೆ</th><th>ಒಟ್ಟು ದರ (ಒಂದು ಜೊತೆಗೆ) (ರೂ ಗಳಲ್ಲಿ)</th><th>ಸಿದ್ಧಪಡಿಸಿದ ಸಮವಸ್ತ್ರ ಪ್ರತಿ ವಿದ್ಯಾರ್ಥಿಗೆ 3 ಜೊತೆ ಯಂತೆ ( ಪ್ರಮಾಣ 2 ಜೊತೆ ಕಲರ್+ಒಂದು ಜೊತೆ ಬಿಳಿ ) ಒಟ್ಟು ಮೊತ್ತ</th></tr>
<tr><td colspan="4">ಬಾಲಕರು :ಶರ್ಟ್ & ಫುಲ್ ಪ್ಯಾಂಟ್</td></tr>
<tr><td>6 ನೇ ತರಗತಿ</td><td>16490</td><td>441</td><td>1323</td></tr>
</table>
</td>
</tr>
</table>

| | | | |
|---|---|---|---|
| 7 ನೇ ತರಗತಿ | 16490 | 441 | 1323 |
| 8 ನೇ ತರಗತಿ | 15180 | 505.58 | 1516.74 |
| 9 ನೇ ತರಗತಿ | 15180 | 505.58 | 1516.74 |
| 10 ನೇ ತರಗತಿ | 15060 | 505.58 | 1516.74 |
| 11 ನೇ ತರಗತಿ | 3840 | 505.58 | 1516.74 |
| 12 ನೇ ತರಗತಿ | 3840 | 505.58 | 1516.74 |
| **ಒಟ್ಟು** | **86080** | | |
| **ಬಾಲಕಿಯರು: ಚೂಡಿದಾರ್ (ಕುರ್ತ+ಪ್ಯಾಂಟ್) + ಜಾಕೇಟ್** | | | |
| 6 ನೇ ತರಗತಿ | 26580 | 696.15 | 2088.45 |
| 7 ನೇ ತರಗತಿ | 26580 | 696.15 | 2088.45 |
| 8 ನೇ ತರಗತಿ | 25260 | 739.73 | 2219.19 |
| **ಬಾಲಕಿಯರು:ಚೂಡಿದಾರ್ (ಕುರ್ತ+ಪ್ಯಾಂಟ್+ದುಪ್ಪಟ್ಟ) + ಜಾಕೇಟ್** | | | |
| 9 ನೇ ತರಗತಿ | 25260 | 967 | 2901 |
| 10 ನೇ ತರಗತಿ | 25010 | 967 | 2901 |
| 11 ನೇ ತರಗತಿ | 4480 | 995.9 | 2987.7 |
| 12 ನೇ ತರಗತಿ | 4480 | 995.9 | 2987.7 |
| **ಒಟ್ಟು** | **137650** | | |
| **ಒಟ್ಟು** | **223730** | | |

ಶೂ, ಸಾಕ್ಸ್, ಟೈ ಮತ್ತು ಬೆಲ್ಟ್:-

ಆದೇಶ ಸಂಖ್ಯೆ: ಸಕಇ 18 ಎಂಡಿಎಸ್ 2026, ದಿನಾಂಕ:23.04.2026 ರನ್ವಯ ದಿನಾಂಕ: 03.07.2026 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ.

| ಕ್ರ.ಸಂ | ಸಾಮಗ್ರಿಗಳ ವಿವರ | ಬಾಲಕರಿಗೆ | | ಬಾಲಕಿಯರಿಗೆ | |
|---|---|---|---|---|---|
| | | ಪ್ರತಿ ವಿದ್ಯಾರ್ಥಿಗೆ ಸರಬರಾಜು ಮಾಡಬೇಕಾದ ಪ್ರಮಾಣ | ದರ (ತೆರಿಗೆ ಸೇರಿ) | ಪ್ರತಿ ವಿದ್ಯಾರ್ಥಿಗೆ ಸರಬರಾಜು ಮಾಡಬೇಕಾದ ಪ್ರಮಾಣ | ದರ (ತೆರಿಗೆ ಸೇರಿ) |
| 1 | ಕಪ್ಪು ಶೂ | 1 ಜೊತೆ | 353.00 | 1 ಜೊತೆ | 353.00 |
| 2 | ಬಿಳಿ ಕ್ಯಾನ್ವಾಸ್ ಶೂ | 1 ಜೊತೆ | 342.00 | 1 ಜೊತೆ | 342.00 |
| 3 | ಡಬಲ್ ನೆಟೆಡ್ ನೈಲಾನ್ ಕಪ್ಪು ಕಾಲು ಚೀಲಗಳು | 2ಜೊತೆ | 100.00 | 2 ಜೊತೆ | 100.00 |
| 4 | ನೈಲಾನ್ ಬಿಳಿ ಕಾಲು ಚೀಲಗಳು | 1 ಜೊತೆ | 50.00 | 1 ಜೊತೆ | 50.00 |
| 5 | ಬೆಲ್ಟ್ | 1 | 62 | 0 | 0 |
| 6 | ಟೈ | 1 | 40 | 0 | 0 |
| | **ಒಟ್ಟು** | **947.00** | | | **845.00** |

| ಕ್ರ.ಸಂ | ತರಗತಿ | ಬಾಲಕರ ಮಂಜೂರಾತಿ ಸಂಖ್ಯೆ | ದರ (ರೂ. ಗಳಲ್ಲಿ) | ಬಾಲಕಿಯರ ಮಂಜೂರಾತಿ ಸಂಖ್ಯೆ | ದರ (ರೂ. ಗಳಲ್ಲಿ) | ಒಟ್ಟಾರೆ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|---|
| 1 | 6ನೇ ತರಗತಿ | 16490 | 947 | 26580 | 845 | 43070 |
| 2 | 7ನೇ ತರಗತಿ | 16490 | 947 | 26580 | 845 | 43070 |
| 3 | 8ನೇ ತರಗತಿ | 15180 | 947 | 25260 | 845 | 40440 |
| 4 | 9ನೇ ತರಗತಿ | 15180 | 947 | 25260 | 845 | 40440 |
| 5 | 10ನೇ ತರಗತಿ | 15060 | 947 | 25010 | 845 | 40070 |
| 6 | 11ನೇ ತರಗತಿ | 3840 | 947 | 4480 | 845 | 8320 |
| 7 | 12ನೇ ತರಗತಿ | 3840 | 947 | 4480 | 845 | 8320 |

ಶಾಲಾ ಬ್ಯಾಗ್‌ಗಳು:-

ಆದೇಶ ಸಂಖ್ಯೆ: ಸಕಇ 82 ಎಂಡಿಎಸ್ 2024, ದಿನಾಂಕ:07.01.2025 ರನ್ವಯ ದಿನಾಂಕ:23.01.2025 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ M/s Kendriya Bhandara, Community Center, CPWD Quarters, Domlur,Bangalore-560071 ರವರು ಯಶಸ್ವಿ L1 ಬಿಡ್‌ದಾರರಾಗಿ ಆಯ್ಕೆಯಾಗಿದ್ದು, ಸದರಿಯವರಿಗೆ ದಿನಾಂಕ:27.06.2025 ರಂದು ಕಾರ್ಯಾದೇಶ ನೀಡಿದ್ದು, ಸರಬರಾಜು ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ.

| **2024-25 ನೇ ಸಾಲಿನ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ** | | **ದರ** |
|---|---|---|
| 6 ನೇ ತರಗತಿ | 40200 | 936.08 |
| 7 ನೇ ತರಗತಿ | 40200 | 936.08 |
| 8 ನೇ ತರಗತಿ | 40070 | 957.65 |
| 9 ನೇ ತರಗತಿ | 39870 | 957.65 |
| 10 ನೇ ತರಗತಿ | 39870 | 957.65 |
| 11 ನೇ ತರಗತಿ | 5760 | 968.43 |
| 12 ನೇ ತರಗತಿ | 5760 | 968.43 |
| **ಒಟ್ಟು** | **211730** | |

ಟೆಂಡರ್ ದಸ್ತಾವೇಜಿನಲ್ಲಿ ಸಿದ್ಧಪಡಿಸಿದ ಸಮವಸ್ತ್ರಗಳು, ಶೂ, ಸಾಕ್ಸ್, ಟೈ ಮತ್ತು ಬೆಲ್ಟ್ ಹಾಗೂ ಶಾಲಾ ಬ್ಯಾಗ್‌ಗಳನ್ನು ಸರಬರಾಜು ಪಡೆಯಲು ನಿರ್ದಿಷ್ಟ ಮಾನದಂಡಗಳನ್ನು ನಿಗಧಿಪಡಿಸಿದೆ. ಸದರಿ ಟೆಂಡರ್‌ದಸ್ತಾವೇಜಿನನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ

| | | |
|---|---|---|
| | | ಪಾರದರ್ಶಕತೆ ಅಧಿನಿಯಮ 1999 ರನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಿ, ನಿರ್ದಿಷ್ಟ ಮಾನದಂಡಗಳನ್ನು ಪೂರೈಸಿದ ಅರ್ಹ ಎಲ್-1 ಬಿಡ್‌ದಾರರಿಗೆ ಸರಬರಾಜು ಆದೇಶ ನೀಡಲಾಗುವುದು. |
| ಈ) | ವಸತಿ ಶಾಲೆಗಳಲ್ಲಿರುವ ಕಾರ್ಮಿಕರ ಮಕ್ಕಳ ಸಂಖ್ಯೆ ಎಷ್ಟು; ಶಾಲೆಗಳಲ್ಲಿರುವ ಕಾರ್ಮಿಕರ ಮಕ್ಕಳಿಗೆ ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಿಂದ ನೀಡಲಾಗುವ ಸ್ಕೂಲ್ ಕಿಟ್‌ಗಳನ್ನು ಎಷ್ಟು ಮಕ್ಕಳಿಗೆ ವಿತರಿಸಲಾಗಿದೆ; (ಶಾಲಾವಾರು ಜಿಲ್ಲಾವಾರು ಮಾಹಿತಿ ನೀಡುವುದು) | ಸಂಘದಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿ ಪ್ರತ್ಯೇಕವಾಗಿ ಮೀಸಲಾತಿಯನ್ನು ಕಲ್ಪಿಸಲಾಗಿರುವುದಿಲ್ಲ. ಆದ್ದರಿಂದ ಕಟ್ಟಡ ಕಾರ್ಮಿಕರ ಮಕ್ಕಳ ವಿವರಗಳನ್ನು ಪ್ರತ್ಯೇಕವಾಗಿ ನಿರ್ವಹಿಸಿರುವುದಿಲ್ಲ. ಆದರೆ ಎಲ್ಲಾ ಪ್ರವರ್ಗದ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಗೆ ಹಾಜರಾಗಿ ವಸತಿ ಶಾಲೆಗಳಲ್ಲಿ ಪ್ರವೇಶಾತಿ ಪಡೆಯಲು ಅವಕಾಶ ಕಲ್ಪಿಸಲಾಗಿದ್ದು, ಇದರಲ್ಲಿ ಕಟ್ಟಡ ಕಾರ್ಮಿಕರ ಮಕ್ಕಳು ಕೂಡ ಸೇರಿರುತ್ತಾರೆ. |
| ಉ) | ಸಮಾಜ ಕಲ್ಯಾಣ ಇಲಾಖೆಯಿಂದ ಸ್ಕೂಲ್ ಕಿಟ್ ನೀಡಿದ ಬಳಿಕ ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಿಂದ ನೀಡಲಾಗುವ ಸ್ಕೂಲ್ ಕಿಟ್‌ಗಳನ್ನು ಅದೇ ಮಕ್ಕಳಿಗೆ ನೀಡಿದಲ್ಲಿ ಒಂದೇ ಮಗುವಿಗೆ ಎರಡು ಕಿಟ್‌ಗಳನ್ನು ನೀಡಿದಂತಾಗುತ್ತಿದ್ದು, ಈ ಕುರಿತು ಸರ್ಕಾರ ಯಾವ ಕ್ರಮವಹಿಸಿದೆ. | ಸಂಘದಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಸಿದ್ಧಪಡಿಸಿದ ಸಮವಸ್ತ್ರ, ಶೂ ಸಾಕ್ಸ್, ಟೈ ಬೆಲ್ಟ್, ನೋಟ್ ಪುಸ್ತಕ ಮತ್ತು ಲೇಖನ ಸಾಮಗ್ರಿ ಶುಚಿ ಹಾಗೂ ಸಂಭ್ರಮ ಕಿಟ್ ಇತ್ಯಾದಿ ಅವಶ್ಯವಿರುವ ಮೂಲಭೂತ ಸೌಕರ್ಯಗಳನ್ನು ಏಕ ಮಾರಿಯಲ್ಲಿ ಸಮಾನವಾಗಿ ಒದಗಿಸಲಾಗುತ್ತಿದೆ. ಪತ್ಯೇಕವಾಗಿ ಸ್ಕೂಲ ಕಿಟ್ ಗಳನ್ನು ಒದಗಿಸಲಾಗುತ್ತಿಲ್ಲ. |

**SWD/291/MDS/2026**

(ಕೆ.ಹೆಚ್.ಮುನಿಯಪ್ಪ)

ಸಮಾಜ ಕಲ್ಯಾಣ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 812 (872)ಕ್ಕೆ ಅನುಬಂಧ-1**

| ಕ್ರ. ಸಂ | ವಸತಿ ಶಾಲೆಗಳ ವಿವರಗಳು | ಪ.ಜಾತಿ | ಪ.ವರ್ಗ | ಹಿಂ.ವರ್ಗ | ಒಟ್ಟು |
|---|---|---|---|---|---|
| 1 | **ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು** | | | | |
| a | ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು (ಸಹ ಶಿಕ್ಷಣ) | 166 | 39 | 122 | 327 |
| b | ಮೇಲ್ದರ್ಜೆಗೇರಿಸಿದ MDRS ವಸತಿ ಶಾಲೆಗಳು (ಸಹ ಶಿಕ್ಷಣ) | 37 | 5 | 8 | 50 |
| c | MDPU ಪದವಿ ಪೂರ್ವ ವಸತಿ ಕಾಲೇಜುಗಳು (ಸಹ ಶಿಕ್ಷಣ) | 12 | 2 | 13 | 27 |
| d | ಮೊರಾರ್ಜಿ ದೇಸಾಯಿ ಬಾಲಕರ ವಸತಿ ಶಾಲೆಗಳು | 1 | 0 | 6 | 7 |
| e | ಮೊರಾರ್ಜಿ ದೇಸಾಯಿ ಬಾಲಕಿಯರ ವಸತಿ ಶಾಲೆಗಳು | 1 | 0 | 1 | 2 |
| f | ಮೇಲ್ದರ್ಜೆಗೇರಿಸಿದ ಬಾಲಕಿಯರ MDRS ವಸತಿ ಶಾಲೆಗಳು | 0 | 0 | 1 | 1 |
| | **ಒಟ್ಟು** | **217** | **46** | **151** | **414** |
| 2 | **ಡಾ. ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗಳು** | | | | |
| a | ಡಾ. ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಗಳು (ಸಹ ಶಿಕ್ಷಣ) | 97 | 24 | 0 | 121 |
| b | ಡಾ. ಬಿ.ಆರ್.ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆಗಳು | 31 | 11 | 0 | 42 |
| c | ಮೇಲ್ದರ್ಜೆಗೇರಿಸಿದ DBRARS ವಸತಿ ಶಾಲೆಗಳು (ಸಹ ಶಿಕ್ಷಣ) | 2 | 0 | 0 | 2 |
| | **ಒಟ್ಟು** | **130** | **35** | **0** | **165** |
| 3 | **ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ವಸತಿ ಶಾಲೆಗಳು** | | | | |
| a | ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ವಸತಿ ಶಾಲೆಗಳು | 108 | 42 | 2 | 152 |
| b | ಮೇಲ್ದರ್ಜೆಗೇರಿಸಿದ KRCRS ಬಾಲಕಿಯರ ವಸತಿ ಶಾಲೆಗಳು | 3 | 4 | 0 | 7 |
| | **ಒಟ್ಟು** | **111** | **46** | **2** | **159** |
| 4 | **ಇಂದಿರಾಗಾಂಧಿ ವಸತಿ ಶಾಲೆಗಳು (ಸಹ ಶಿಕ್ಷಣ)** | | | | |
| a | ಇಂದಿರಾಗಾಂಧಿ ವಸತಿ ಶಾಲೆಗಳು (ಸಹ ಶಿಕ್ಷಣ) | 62 | 26 | 8 | 96 |
| b | ಮೇಲ್ದರ್ಜೆಗೇರಿಸಿದ IGRS ವಸತಿ ಶಾಲೆಗಳು (ಸಹ ಶಿಕ್ಷಣ) | 2 | 0 | 0 | 2 |
| | **ಒಟ್ಟು** | **64** | **26** | **8** | **98** |
| 5 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳು (ಸಹ ಶಿಕ್ಷಣ) | 10 | 1 | 5 | 16 |
| 6 | **ಹುತಾತ್ಮರ ವಸತಿ ಶಾಲೆಗಳು** | | | | |
| a | ಹುತಾತ್ಮರ ವಸತಿ ಶಾಲೆಗಳು(ಸಹ ಶಿಕ್ಷಣ) | 0 | 0 | 2 | 2 |
| b | ಹುತಾತ್ಮರ ವಸತಿ ಶಾಲೆಗಳು(ಬಾಲಕಿಯರ) | 0 | 0 | 1 | 1 |
| c | ಹುತಾತ್ಮರ ವಸತಿ ಶಾಲೆಗಳು(ಬಾಲಕರ) | 0 | 0 | 1 | 1 |
| | **ಒಟ್ಟು** | **0** | **0** | **4** | **4** |
| 7 | ಪ್ರತಿಭಾನ್ವಿತ ಬಾಲಕಿಯರ ವಸತಿ ಶಾಲೆಗಳು | 4 | 0 | 0 | 4 |
| 8 | ಶ್ರೀ ನಾರಾಯಣ ಗುರು ವಸತಿ ಶಾಲೆ (ಸಹ ಶಿಕ್ಷಣ) | 0 | 0 | 4 | 4 |
| 9 | ಡಿ. ದೇವರಾಜ್ ಅರಸು ವಸತಿ ಶಾಲೆಗಳು (ಸಹ ಶಿಕ್ಷಣ) | 0 | 0 | 4 | 4 |
| 10 | ಮಹಾತ್ಮ ಜ್ಯೋತಿ ಬಾ ಫುಲೆ ವಸತಿ ಶಾಲೆ (ಸಹ ಶಿಕ್ಷಣ) | 1 | 1 | 0 | 2 |
| 11 | ಮಾಸ್ತಿ ವೆಂಕಟೇಶ ಐಯ್ಯಂಗಾರ್ ವಸತಿ ಶಾಲೆ (ಸಹ ಶಿಕ್ಷಣ) | 0 | 0 | 1 | 1 |
| 12 | ಶ್ರೀಮತಿ ರಮಾಬಾಯಿ ಅಂಬೇಡ್ಕರ್ ವಸತಿ ಶಾಲೆಗಳು (ಸಹ ಶಿಕ್ಷಣ) | 1 | 0 | 0 | 1 |
| 13 | ಶ್ರೀಮತಿ ಸಾವಿತ್ರಿ ಬಾ ಫುಲೆ ವಸತಿ ಶಾಲೆಗಳು (ಸಹ ಶಿಕ್ಷಣ) | 1 | 0 | 0 | 1 |
| 14 | ಸಂತಸೇವಾಲಾಲ್ ವಸತಿ ಶಾಲೆ | 1 | 0 | 0 | 1 |
| | **Grand Total** | **540** | **155** | **179** | **874** |

ಅನುಬಂಧ - 2

| ಕ್ರ.ಸಂ | ಜಿಲ್ಲೆ ಹೆಸರು | ತಾಲ್ಲೂಕು ಹೆಸರು | ಕ್ರ. ಸಂ | ವಸತಿ ಶಾಲೆಗಳ ವಿವರ |
|---|---|---|---|---|
| 1 | ಬೆಂಗಳೂರು ನಗರ | ಬೆಂಗಳೂರು ಉತ್ತರ | 1 | ಸರ್ಕಾರಿ ವಸತಿ ಶಾಲೆ ಯಲಹಂಕ |
| | | ಬೆಂಗಳೂರು ಪೂರ್ವ | 2 | ಸರ್ಕಾರಿ ವಸತಿ ಶಾಲೆ ದೊಡ್ಡಕನ್ನಹಳ್ಳಿ |
| 2 | ಶಿವಮೊಗ್ಗ | ಶಿಕಾರಿಪುರ | 3 | ಸರ್ಕಾರಿ ವಸತಿ ಶಾಲೆ ಮಳವಳ್ಳಿ |
| | | ಶಿಕಾರಿಪುರ | 4 | ಸರ್ಕಾರಿ ವಸತಿ ಶಾಲೆ ಮಂಚಿಕೊಪ್ಪ |
| 3 | ಕೋಲಾರ | ಬಂಗಾರು ಪೇಟೆ | 5 | ಸರ್ಕಾರಿ ವಸತಿ ಶಾಲೆ, ಬಂಗಾರಪೇಟೆ ತಾಲ್ಲೂಕು |
| 4 | ತುಮಕೂರು | ತುಮಕೂರು | 6 | ಸರ್ಕಾರಿ ವಸತಿ ಶಾಲೆ ತುಮಕೂರು ಟೌನ್ |
| | | ಪಾವಗಡ | 7 | ಸರ್ಕಾರಿ ವಸತಿ ಶಾಲೆ ಪಾವಗಡ ಟೌನ್ |
| 5 | ಚಿಕ್ಕಬಳ್ಳಾಪುರ | ಗೌರಿಬಿದನೂರು | 8 | ಸರ್ಕಾರಿ ವಸತಿ ಶಾಲೆ ಗೌರಿಬಿದನೂರು |
| 6 | ಮೈಸೂರು | ಮೈಸೂರು | 9 | ಸರ್ಕಾರಿ ವಸತಿ ಶಾಲೆ ಮೈಸೂರು ಟೌನ್ (ಶಾಂತಿನಗರ) |
| | | ಮೈಸೂರು | 10 | ಸರ್ಕಾರಿ ವಸತಿ ಶಾಲೆ, ಗಾಂಧಿನಗರ ಮೈಸೂರು ಟೌನ್ |
| 7 | ಚಿಕ್ಕ ಮಗಳೂರು | ತರೀಕೆರೆ | 11 | ಸರ್ಕಾರಿ ವಸತಿ ಶಾಲೆ ಎಂ.ಸಿ ಹಳ್ಳಿ |
| | | ಕಡೂರು | 12 | ಸರ್ಕಾರಿ ವಸತಿ ಶಾಲೆ ಕಡೂರು ಟೌನ್ |
| 8 | ದಕ್ಷಿಣ ಕನ್ನಡ | ಬಂಟ್ವಾಳ | 13 | ಸರ್ಕಾರಿ ವಸತಿ ಶಾಲೆ ಬಂಟ್ವಾಳ |
| 9 | ಹಾಸನ | ಹೊಳೇ ನರಸಿಪುರ | 14 | ಸರ್ಕಾರಿ ವಸತಿ ಶಾಲೆ ಹೊಳೆನರಸೀಪುರ ಟೌನ್ |
| | | ಬೇಲೂರು | 15 | ಸರ್ಕಾರಿ ವಸತಿ ಶಾಲೆ ನರಸೀಪುರ ಭೋವಿ ಕಾಲೋನಿ |
| | | ಚೆನ್ನರಾಯಪಟ್ಟಣ | 16 | ಸರ್ಕಾರಿ ವಸತಿ ಶಾಲೆ, ಭೂವನ ಹಳ್ಳಿ |
| | | ಅರಸೀಕೆರೆ | 17 | ಸರ್ಕಾರಿ ವಸತಿ ಶಾಲೆ, ಗಂಡಸಿ |
| 10 | ಕೊಡಗು | ಮಡಿಕೇರಿ | 18 | ಸರ್ಕಾರಿ ವಸತಿ ಶಾಲೆ, ಕಾಕಬ್ಬೆ |
| 11 | ಬೆಳಗಾವಿ | ಬೆಳಗಾವಿ | 19 | ಸರ್ಕಾರಿ ವಸತಿ ಶಾಲೆ, ಬಾಳೆಕುಂದ್ರಿಕ್ಯಾಂಪ್, ಬೆಳಗಾವಿ ಟೌನ್ |
| | | ಬೆಳಗಾವಿ | 20 | ಸರ್ಕಾರಿ ವಸತಿ ಶಾಲೆ, ಬೆಳಗಾವಿ ಟೌನ್ |
| | | ರಾಯಭಾಗ್ | 21 | ಸರ್ಕಾರಿ ವಸತಿ ಶಾಲೆ, ಕುಡಚಿ |
| 12 | ವಿಜಯಪುರ | ಇಂಡಿ | 22 | ಸರ್ಕಾರಿ ವಸತಿ ಶಾಲೆ ಹಂಜಗಿ |
| 13 | ಬಾಗಲ ಕೋಟೆ | ಬೀಳಗಿ | 23 | ಸರ್ಕಾರಿ ವಸತಿ ಶಾಲೆ ಕುಂದರಗಿ |
| | | ಮುಧೋಳ | 24 | ಸರ್ಕಾರಿ ವಸತಿ ಶಾಲೆ ಮುಧೋಳ |
| | | ಬಾಗಲಕೋಟೆ | 25 | ಸರ್ಕಾರಿ ವಸತಿ ಶಾಲೆ ನವನಗರ, ಮುಚ್ಚಂಡಿ |
| 14 | ಧಾರವಾಡ | ಧಾರವಾಡ | 26 | ಸರ್ಕಾರಿ ವಸತಿ ಶಾಲೆ, ಧಾರವಾಡ ಟೌನ್ |
| 15 | ಗದಗ | ಗದಗ ಟೌನ್ | 27 | ಸರ್ಕಾರಿ ವಸತಿ ಶಾಲೆ, ಶಿಗ್ಗಿ |
| | | ರೋಣ | 28 | ಸರ್ಕಾರಿ ವಸತಿ ಶಾಲೆ, ಗಜೇಂದ್ರ ಘಡ |
| 16 | ಹಾವೇರಿ | ರಾಣಿ ಬೆನ್ನೂರು | 29 | ಸರ್ಕಾರಿ ವಸತಿ ಶಾಲೆ, ರಾಣಿ ಬೆನ್ನೂರು |
| | | ರಾಣಿ ಬೆನ್ನೂರು | 30 | ಸರ್ಕಾರಿ ವಸತಿ ಶಾಲೆ, ನೂಕಾಪುರ |
| | | ಹಿರೇಕೆರೂರು | 31 | ಸರ್ಕಾರಿ ವಸತಿ ಶಾಲೆ, ಹಿರೆಕೆರೂರು ಟೌನ್ |
| | | ಬ್ಯಾಡಗಿ | 32 | ಸರ್ಕಾರಿ ವಸತಿ ಶಾಲೆ ಬ್ಯಾಡಗಿ ಟೌನ್ |
| | | ಶಿಗ್ಗಾವಿ | 33 | ಸರ್ಕಾರಿ ವಸತಿ ಶಾಲೆ ಶಿಗ್ಗಾವಿ ಟೌನ್ |
| | | ಹಾನಗಲ್ | 34 | ಸರ್ಕಾರಿ ವಸತಿ ಶಾಲೆ ಹಾನಗಲ್ ಟೌನ್ |
| | | ಹಾವೇರಿ | 35 | ಸರ್ಕಾರಿ ವಸತಿ ಶಾಲೆ ಹಾವೇರಿ ಟೌನ್ |
| 17 | ಉತ್ತರ ಕನ್ನಡ | ಸಿದ್ದಪುರ | 36 | ಸರ್ಕಾರಿ ವಸತಿ ಶಾಲೆ ಕೊಂಡ್ಲಿ |
| | | ಹಳಿಯಾಳ | 37 | ಸರ್ಕಾರಿ ವಸತಿ ಶಾಲೆ ಹಳಿಯಾಳ ಟೌನ್ |

| | | | | |
|---|---|---|---|---|
| | | ಸಿರಸಿ | 38 | ಸರ್ಕಾರಿ ವಸತಿ ಶಾಲೆ ಬನವಾಸಿ, ಸಿರಸಿ |
| 18 | ಕಲುಬುರಗಿ | ಕಲುಬುರಗಿ | 39 | ಸರ್ಕಾರಿ ವಸತಿ ಶಾಲೆ ಸಂತ್ರಸ್ತವಾಡಿ |
| | | ಚಿತ್ತಾಪುರ | 40 | ಸರ್ಕಾರಿ ವಸತಿ ಶಾಲೆ ಕಾಳಗಿ |
| | | ಚಿತ್ತಾಪುರ | 41 | ಸರ್ಕಾರಿ ವಸತಿ ಶಾಲೆ, ವಡ್ಡೇರ ಕಾಲೋನಿ, ಶಹಾಬಾದ್ ಟೌನ್ |
| | | ಸೇಡಂ | 42 | ಸರ್ಕಾರಿ ವಸತಿ ಶಾಲೆ, ಮಲಖೇಡ್ ಸ್ಟೇಷನ್ |
| | | ಅಫಜಲ್ ಪುರ | 43 | ಸರ್ಕಾರಿ ವಸತಿ ಶಾಲೆ, ಅಫಜಲ್ ಪುರ |
| | | ಚಿತ್ತಾಪುರ | 44 | ಸರ್ಕಾರಿ ವಸತಿ ಶಾಲೆ ಬಂಕೂರ |
| 18 | ಕಲುಬುರಗಿ | ಚಿಂಚೋಳಿ | 45 | ಸರ್ಕಾರಿ ವಸತಿ ಶಾಲೆ ಚಿಂಚೋಳಿ ಟೌನ್ |
| | | ಚಿಂಚೋಳಿ | 46 | ಸರ್ಕಾರಿ ವಸತಿ ಶಾಲೆ ಪಾಲಾತ್ಯ ತಾಂಡಾ |
| | | ಚಿಂಚೋಳಿ | 47 | ಸರ್ಕಾರಿ ವಸತಿ ಶಾಲೆ ಒಂಟಿ ಚಿಂತಾ ತಾಂಡಾ |
| | | ಆಳಂದ | 48 | ಸರ್ಕಾರಿ ವಸತಿ ಶಾಲೆ ಕೋರಹಳ್ಳಿ ತಾಂಡಾ |
| | | ಅಫಜಲ್ ಪುರ | 49 | ಸರ್ಕಾರಿ ವಸತಿ ಶಾಲೆ ಅರ್ಜುಣಗಿ ತಾಂಡಾ |
| 19 | ಯಾದಗಿರಿ | ಯಾದಗಿರಿ | 50 | ಸರ್ಕಾರಿ ವಸತಿ ಶಾಲೆ ಬೋರಬಂಡಾ |
| | | ಯಾದಗಿರಿ | 51 | ಸರ್ಕಾರಿ ವಸತಿ ಶಾಲೆ ಆಲೀಪುರ |
| 20 | ರಾಯಚೂರು | ರಾಯಚೂರು | 52 | ಸರ್ಕಾರಿ ವಸತಿ ಶಾಲೆ ರಾಯಚೂರು ಟೌನ್ |
| | | ರಾಯಚೂರು | 53 | ಸರ್ಕಾರಿ ವಸತಿ ಶಾಲೆ, ಖಾನಾಪುರ- ಉಡಮಗಲ್ |
| | | ಲಿಂಗಸಗೂರು | 54 | ಸರ್ಕಾರಿ ವಸತಿ ಶಾಲೆ, ಆಡಬಾವಿ ತಾಂಡಾ |
| | | ಲಿಂಗಸಗೂರು | 55 | ಸರ್ಕಾರಿ ವಸತಿ ಶಾಲೆ, ಆಶೀಹಾಳ ತಾಂಡಾ |
| | | ಲಿಂಗಸಗೂರು | 56 | ಸರ್ಕಾರಿ ವಸತಿ ಶಾಲೆ, ಮಾರಲ ದಿನ್ನಿ ತಾಂಡಾ |
| | | ದೇವದುರ್ಗ | 57 | ಸರ್ಕಾರಿ ವಸತಿ ಶಾಲೆ, ಬಂಡೇಗುಡ್ಡ |
| | | ದೇವದುರ್ಗ | 58 | ಸರ್ಕಾರಿ ವಸತಿ ಶಾಲೆ, ದೇವದುರ್ಗ ಟೌನ್ |
| 21 | ಕೊಪ್ಪಳ | ಗಂಗಾವತಿ | 59 | ಸರ್ಕಾರಿ ವಸತಿ ಶಾಲೆ, ನವಲಿ ತಾಂಡಾ |
| 22 | ಬಳ್ಳಾರಿ | ಬಳ್ಳಾರಿ | 60 | ಸರ್ಕಾರಿ ವಸತಿ ಶಾಲೆ ಬಳ್ಳಾರಿ ಟೌನ್ |
| 23 | ವಿಜಯ ನಗರ | ಹರಪ್ಪನಹಳ್ಳಿ | 61 | ಸರ್ಕಾರಿ ವಸತಿ ಶಾಲೆ ಹರಪ್ಪನ ಹಳ್ಳಿ |
| 24 | ಬೀದರ್ | ಬೀದರ್ | 62 | ಸರ್ಕಾರಿ ವಸತಿ ಶಾಲೆ, ಸಂಗೊಳಗಿ ತಾಂಡಾ |
| | | ಬಸವ ಕಲ್ಯಾಣ | 63 | ಸರ್ಕಾರಿ ವಸತಿ ಶಾಲೆ, ಏಕಲೂರು ತಾಂಡಾ |
| | | ಬಸವ ಕಲ್ಯಾಣ | 64 | ಸರ್ಕಾರಿ ವಸತಿ ಶಾಲೆ, ಕಲಕೋರ ತಾಂಡಾ |
| | | ಬಸವ ಕಲ್ಯಾಣ | 65 | ಸರ್ಕಾರಿ ವಸತಿ ಶಾಲೆ, ಹಾರಕೂಡ ತಾಂಡಾ |
| | | ಔರದ | 66 | ಸರ್ಕಾರಿ ವಸತಿ ಶಾಲೆ, ಚಿಕ್ಕಿಯು ತಾಂಡಾ |
| | | | 67 | ಸರ್ಕಾರಿ ವಸತಿ ಶಾಲೆ ನಿಲ್ಮನಹಳ್ಳಿ ತಾಂಡಾ |